

ನಮ್ಮ ಗ್ರಾಮೀಣ ಭಾಗದಲ್ಲಿ ಇತ್ತೀಚೆಗೆ ಆವಾಗವಾಗ ಚಿರತೆ ಕಾಟ ಇದ್ದೇ ಇರುತ್ತದೆ. ಎಲ್ಲೋ ಒಂದು ಕಡೆ ತೋಟದ ಬೇಲಿಲಿ ಯಾರೋ ಒಬ್ರು ಚಿರತೆ ಕಂಡಂಗಾಯ್ತು ಅಂದ್ರೆ ಇಡೀ ಊರೇ ನೂರೆಂಟು ಕತೆ ಕಟ್ಟಿ ಬಿಡುತ್ತೆ. ಯಾವನೋ ಕಟ್ಟೆ ಕಡೆಗೆ ಹೋದಾಗ ಏನೋ ಸರಿದಾಡಿದಂಗಾಯ್ತು ಎಂದು ಅರ್ಧಕ್ಕೆ ಚೆಂಬು ಎಸೆದು ಚಡ್ಡಿನೂ ಎಳ್ಕೊಳ್ದೇ ಹಾಗೇ ಓಡಿ ಬಂದಿರ್ತಾನೆ. ಅವನು ಆ ಸ್ಥಿತಿಲಿ ಹಾವು, ಚಿರತೆ, ಹುಲಿ, ಸಿಂಹ ಏನೇ ಕಂಡೆ ಅಂದ್ರೂ ಜನ ಅವನ ಅವತಾರ ನೋಡಿ ನಂಬಲೇಬೇಕು. ಅದು ಚಿರತೆನೇ ಆಗಿರಬೇಕು ಎಂದೇನಿಲ್ಲ, ಸಣ್ಣದೊಂದು ಓತಿಕ್ಯಾತ, ಇಲ್ಲ ಮುಂಗುಸಿ, ನರಿ, ಹೊಳ್ಳೆಪಿಂಗ, ಇಲಿ ಎಂತದ್ದೂ ಆಗಿರಬಹುದು. ಈ ಯಾವನೋ ಒಬ್ಬ ಕಂಡ ಈ ಸುದ್ದಿ ಊರಿಂದ ಊರಿಗೆ ಹರಡಿ ಎಲ್ಲರಿಗೂ ಎಲ್ಲೆಲ್ಲೂ ಚಿರತೆಗಳೇ ಕಾಣಲಾರಂಭಿಸುತ್ತವೆ. ಗದ್ದೆ ಬಯಲು, ಹೊಲ, ತ್ವಾಟದ ಮನೆ, ಕೊಟ್ಟಿಗೆ, ಕೆರೆ ಅಂಗಳ, ಕಟ್ಟೆ ಜೌಗು ಎಲ್ಲಾ ಕಡೆ ಚಿರತೆಗಳು ಪಕ್ಕನೆ ಕಾಣಿಸಿಕೊಂಡಂಗಾಗಿ ಜನ ಒಂದಕ್ಕೆರಡು ಸೇರಿಸಿ ವದಂತಿ ಹಬ್ಬಿಸುತ್ತಾ ಹೋಗುತ್ತಾರೆ.

ಹಳ್ಳಿ ಕಡೆ ಬೇಲಿ ಬದಿ ಕಳ್ಳಾಟಗಳು, ತೋಟದ ಮನೆ, ಪಂಪ್‌ಹೌಸಲ್ಲಿ ಕದ್ದು ಮುಚ್ಚಿ ನಡೆಸುವ 'ಡವ್ವಾ ಡವ್ವಿ ಪ್ರಣಯ ಪ್ರಸಂಗ'ಗಳಿಗೇನೂ ಬರವಿಲ್ಲ. ಹಾಗೇ ಕೆರೆ ಮರಳು ಎತ್ತೋರು, ಮರ ಕಡಿಯೋರು, ಕಳ್ಳ ಇಳಿಸೋರು,ಇಸ್ಪೀಟು, ಜೂಜು, ಮಟ್ಕಾ ಆಡೋರು, ಎಣ್ಣೆ ಹಾಕ್ಕಂಡು ಪಾರ್ಟಿ ಮಾಡೋರು ಇಂತ ಕೆಲವು ಐನಾತಿ ನನ್ಮಕ್ಳು ತಮ್ಮ ವ್ಯವಹಾರಕ್ಕೆ ಅನುಕೂಲ ಆಗ್ಲಿ, ಜನ ಈ ಕಡೆ ಬರದೆ ಇರಲಿ ಅಂತ 'ಚಿರತೆ ಬಂದೈತೆ' ಎಂದು ಸುಳ್ಳು ಸುದ್ದಿ ಹಬ್ಬಿಸಿ ತಮ್ಮ ಬೇಳೆ ಬೇಯಿಸ್ಕೊತಾರೆ. ಮುಂಚೆ ಎಲ್ಲಾ 'ಆನೆ ಬಂತು' ಅನ್ನೋ ಸುದ್ದಿ ತೇಲಿ ಬಿಡ್ತಿದ್ರು. ಆನೆಯಂತಹ ಮಜಬೂತಾದ ಪ್ರಾಣಿ ವಾರಗಟ್ಟಲೆ ಯಾರ ಕಣ್ಣಿಗೂ ಬೀಳಲಿಲ್ಲ ಅಂದ್ರೆ ಅನುಮಾನ ಬರುತ್ತೆ ಅಂತ ಬೇಲಿಯಿಂದ ಬೇಲಿಗೆ ಟಣ್ಣನೆ ಜಿಗಿವ ಚಿರತೆಯನ್ನು ತಮ್ಮ ಅಸ್ತ್ರ ಮಾಡ್ಕೊಂಡಿದಾರೆ. ಹೀಗೆ ಯಾರೋ 'ತೋಳ ಬಂತು ತೋಳ' ಅನ್ನೋ ಕತೆ ತರ 'ಚಿರತೆ ಬಂತು ಚಿರತೆ' ಅಂತ ಕೂಗಿಬಿಟ್ರೆ ಸಾಕು ಜನ ಎದ್ನೋ ಬಿದ್ನೋ ಅಂತ ಓಡಿ ಬಿಡ್ತಾರೆ.




ಇದರಲ್ಲಿ ಯಾವನೋ ಒಬ್ಬ ಪಂಚಾಯ್ತಿ ಮೆಂಬರ್ರೋ, ಸೊಸೈಟಿ ಮೆಂಬರ್ರೋ ತಾನೇ ಊರು ಉದ್ಧಾರ ಮಾಡೋನು ಅನ್ನೋ ಹಂಗೆ ಈ ವಿಷಯನ ಪತ್ರಕರ್ತರ ಕಿವಿಗೆ ಊದ್ ಬಿಟ್ಟು ತನ್ ಹೆಸರು ಹಾಕ್ಬೇಕು ಅಂತ ಫರ್ಮಾನ್ ಕೊಟ್ಟು ಬಿಡ್ತಾನೆ. ಮಾರನೇ ಬೆಳಿಗ್ಗೆ ಲೋಕಲ್ ಪೇಪರ್ರಲ್ಲಿ 'ಚಿರತೆಯಿಂದ ಕಂಗಾಲಾದ ಜನ, ಅರಣ್ಯ ಇಲಾಖೆಯವರ ನಿರ್ಲಕ್ಷ್ಯ, ಚಿರತೆಯೊಂದಿಗೆ ಶಾಮೀಲಾ?' ಎಂಬ ವಿಪರೀತದ ಸುದ್ದಿ ಫಾರೆಸ್ಟ್ ಡಿಪಾರ್ಟ್‌ಮೆಂಟೋರ ತಲೆ, ನಿದ್ದೆ ಎರಡೂ ಕೆಡಿಸಿಬಿಡುತ್ತೆ. ಎಷ್ಟೋ ಸಾರಿ ಈ ಚಿರತೆ ಅನ್ನೋ ಹೆಸರೇ ಫಾರೆಸ್ಟೋರಿಗೆ ಒಂಥರಾ ನೈಟ್‌ಮೇರ್ ಆಗಿ ಅವರು ನಿದ್ದೇಲೂ ಕನವರಿಸಿ ಎದ್ದು ಕೂರೋ ಹಾಗಾಗಿರುತ್ತೆ. ಮೇಲಿಂದ ಮಿನಿಸ್ಟ್ರೋ ಎಂಎಲ್‌ಎನೋ ' ಚಿರತೆ ಅಟ್ಯಾಕ್ ಮಾಡ್ತಿದ್ದಾವಂತೆ! ಏನ್ ಕತ್ತೆ ಕಾಯ್ತಿದೀರೇನ್ರೀ?' ಎಂದು ಫೋನ್ ಮಾಡಿದಾಗ ನಿಮ್ ಎಸ್ಕಾರ್ಟ್‌ಗೆ ಡೆಪ್ಯೂಟ್ ಮಾಡಿದ್ರು ಅಂತ ಹೇಳಕ್ಕಾಗದೆ ಆರ್‌ಎಫ್‌ಒಗಳು ಉಗುಳು ನುಂಗಿಕೊಂಡು ಸುಮ್ನಾಗಿರ್ತಾರೆ.

ಹಾಗಂತ ಎಲ್ಲಾ ಪ್ರಕರಣಗಳೂ ಹೀಗೇ ಊಹಾಪೋಹ, ಕಲ್ಪನೆ, ಕಟ್ಟುಕತೆ ಎನ್ನುವಂತಿಲ್ಲ. ಹೀಗೆ ಕಾಗಕ್ಕ, ಗುಬ್ಬಕ್ಕನ ಕತೆ ಎಂದು ಫಾರೆಸ್ಟೋರು ಅಂಡಿನ ಮೇಲಿನ ದೂಳು ಹೊಡ್ಕಂಡು ಹೋದ ಬೆನ್ನಿಗೇ ಯಾವುದೋ ಪ್ರಾಣಿ ಒಂದು ಹಸು ಮೇಲೋ, ನಾಯಿ ಮೇಲೋ ದಾಳಿ ಮಾಡೇ ಬಿಟ್ಟಿರುತ್ತೆ. ಅಲ್ಲಿಗೆ ಚಿರತೆ ಸುತ್ತ ಮುತ್ತ ಎಲ್ಲೋ ಇದೆ ಅನ್ನೋದು ಗ್ಯಾರೆಂಟಿ. ಜನ ಚಿರತೆ ಹಿಡೀಲೇಬೇಕು ಎಂದು ಧರಣಿ ಕೂತ್ಕೊತಾರೆ. ಆಮೇಲೆ ಉಸ್ತುವಾರಿ ಮಂತ್ರಿಗಳು, ಸಂಸದರು, ಶಾಸಕರು, ಕನ್ಸರ್ವೇಟರ್, ಆರ್‌ಎಫ್‌ಒಯಿಂದ ಗಾರ್ಡ್‌ವರೆಗೆ ಎಲ್ಲಾ ಗ್ರಾಮಗಳಿಗೆ ಎಡತಾಕ್ತಾರೆ. ಪ್ರಾಣಿತಜ್ಞರು ಬಂದು ಸ್ಥಳ ಮಹಜರು ಮಾಡಿ 'ಇಲ್ಲ ಇದು ಚಿರತೆ ಕೆಲಸ ಅಲ್ಲ, ಕತ್ತೆ ಕಿರುಬನ ಕೆಲಸ ಅಷ್ಟೇ' ಎಂದು ತಮ್ಮೆಲ್ಲಾ ಸಂಶೋಧನೆ, ಶೋಧನೆಯ ಬುದ್ಧಿ ಉಪಯೋಗಿಸಿ ಹೇಳುದ್ರೂ ಜನ ಮಾತ್ರ ನಂಬದೆ ಅದು ಅರಣ್ಯ ರೋದನವಾಗಿಯೇ ಉಳಿಯುತ್ತದೆ. ಆಗ ಫಾರೆಸ್ಟ್‌ನವರಿಗೆ ಪೀಕಲಾಟ ಶುರುವಾಗುತ್ತೆ. ಇಲ್ಲದ ಚಿರತೆಗಾಗಿ ಅವರು ಬೋನೊಡ್ಡಿ ಕಾಯುತ್ತಾ ಕೂರಬೇಕು. ಯಾವುದಾದರೂ ಚಿರತೆಯನ್ನು ತಂದು ಬೋನಿನಲ್ಲಿ ಹಾಕಿ ಜನರಿಗೆ ತೋರಿಸಬೇಕು. ಆಗಷ್ಟೇ ಜನ ನಂಬಿ ಧೈರ್ಯವಾಗಿ ಚೊಂಬು ಹಿಡಿದು ಕಟ್ಟೆ ಕಡೆಗೆ ಹೋಗಲು ಸಾಧ್ಯ! (ಹೀಗೆ ಅವಾಗವಾಗ ಚಿರತೆ ಊರ ಕಡೆ ವಿಸಿಟಿಂಗ್ ಪ್ರೊಫೆಸರ್ ತರ ಬಂದು ಹೋದರೆ ಜನ ಕಟ್ಟೆ ಕಡೆ ಹೋಗುವುದನ್ನು ಖೈದು ಮಾಡಿ ಮನೆಯಲ್ಲೇ ಸಂಡಾಸು ಕಟ್ಟಿಸಿಕೊಂಡಾರು.

ಸ್ವಚ್ಛಭಾರತ ಯೋಜನೆ ಈ ತರ ಕಾಡು ಪ್ರಾಣಿಗಳ ನಾಡಿನ ವಲಸೆಯಿಂದಷ್ಟೇ ಸಾಕಾರಗೊಂಡೀತು ಎನ್ನುವುದು ಯಾಕೆ ನಮ್ಮ ಯೋಜನಾ ತಜ್ಞರಿಗೆ ಹೊಳೆದಿಲ್ಲವೋ ಗೊತ್ತಿಲ್ಲ.) ಇದು ಎಷ್ಟು ವಿಕೋಪಕ್ಕೆ ಹೋಗುತ್ತದೆಂದರೆ ನಮ್ಮೂರ ಬಳಿ ಒಂದು ಹಳ್ಳಿಯಲ್ಲಿ ಜನ ವಾರವಾದರೂ ಚಿರತೆ ಹಿಡೀಲಿಲ್ಲ ಅಂತ ರಾಂಗಾಗಿ ಫಾರೆಸ್ಟೋರನ್ನೇ ಬೋನಲ್ಲಿ ಕೂಡಿ ಹಾಕಿ ವಿನೂತನ ಪ್ರತಿಭಟನೆ ಮಾಡಿಯೇ ಬಿಟ್ರು! ಚಿರತೆಗಳು ಅದೆಷ್ಟು ನಕ್ಕವೋ ಏನೋ? ಅರಣ್ಯ ಸಿಬ್ಬಂದಿ ಮನೆಯ ಹೆಂಡತಿ ಅನ್ನೋ ಚಿರತೆಗಿಂತ ಇಲ್ಲಿ ಬಂಧಿಯಾಗಿರುವುದೇ ವಾಸಿ ಎಂದು ನಿರಾಳವಾಗಿ ಸುಮ್ಮನಾಗಿಬಿಟ್ಟರೋ ಏನೋ? ಆದಾಗ್ಯೂ ಚಿರತೆಗಳು ಕಾಡಿಂದ ನಾಡಿಗೆ ಬಂದು ಹಸುಗಳ ಮೇಲೆ ಮನುಷ್ಯರ ಮೇಲೆ ಆಕ್ರಮಣ ಮಾಡುವುದು ಮೊದಲಿಗಿಂತ ಹೆಚ್ಚಾಗೇ ಇದೆ. ಚಿರತೆಗಳು ಕಾಡಿಂದ ನಾಡಿಗೇಕೆ ಬರುತ್ತಿವೆ ಎಂಬುದರ ಬಗ್ಗೆ ಪ್ರಾಣಿತಜ್ಞರು, ಪ್ರಾಣಿ